# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮

ಸ್ಥಾಪನೆ : ೧೯೧೫

ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪  ಫ್ಯಾಕ್ಸ್ : ೨೬೫೨೩೪೮೬

http://www.kasapa.in  e-mail : kannadaparishattu@gmail.com


---

ಕ್ರಮಸಂಖ್ಯೆ : ಕಸಾಪ / ದತ್ತಿ ಕಾರ್ಯಕ್ರಮ / ೨೦೨೧–೨೨ ದಿನಾಂಕ : ೦೮–೦೩–೨೦೨೨

ಇವರಿಗೆ

ಸಂಪಾದಕರು / ಮುಖ್ಯ ವರದಿಗಾರರು
.......................................ಬೆಂಗಳೂರು

ಮಾನ್ಯರೆ,

**ಪ್ರಕಟಣೆ ಕೃಪೆಗಾಗಿ**

## ಯುವ ಬರಹಗಾರರಿಗೆ ತಾಳ್ಮೆ ಬೇಕು, ಕೃತಿ ಹೆಚ್ಚಿಸುವ ಆತುರ ಬೇಡ – ಶ್ರೀಮತಿ ನುಗ್ಗೇಹಳ್ಳಿ ಪಂಕಜ.

### ಪದ್ಮಭೂಷಣ ಡಾ. ಬಿ.ಸರೋಜಾದೇವಿ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ

ಇಂದಿನ ಯುವ ಬರಹಗಾರರಿಗೆ ಸಾಹಿತ್ಯ ಆತುರ ಜಾಸ್ತಿ ಇದೆ. ಕೃತಿಯ ಸಂಖ್ಯೆಯನ್ನು ಹೆಚ್ಚಿಸುವ ತವಕದಲ್ಲಿ ಮೌಲ್ಯಯುತ ಕೃತಿ ರಚನೆಯತ್ತ ಲಕ್ಷ್ಯ ವಹಿಸುತ್ತಿಲ್ಲವೆಂದು ಹಿರಿಯ ಸಾಹಿತಿ ನುಗ್ಗೇಹಳ್ಳಿ ಪಂಕಜ ಅಭಿಪ್ರಾಯಪಟ್ಟರು.

ಇಂದು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕೊಡಮಾಡುವ ಪದ್ಮಭೂಷಣ ಡಾ. ಬಿ. ಸರೋಜಾದೇವಿ ಸಾಹಿತ್ಯ ದತ್ತಿ ಪ್ರಶಸ್ತಿ ಸ್ವೀಕರಿದ ಪಂಕಜ ಅವರು ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು ನನ್ನ ಬರವಣಿಗೆಗೆ ಅದೆಷ್ಟೋ ಪ್ರಶಸ್ತಿಗಳು ಬಂದಿವೆಯಾದರೂ ೧೦೬ ವರ್ಷಗಳ ಇತಿಹಾಸವಿರುವ ಏಕೈಕ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪಡೆಯುತ್ತಿರುವ ಈ ಪ್ರಶಸ್ತಿಯು ನನ್ನ ಸಾಹಿತ್ಯ ಸಾಧನೆಗೆ ಸಂದ ಮಹತ್ವದ ಗೌರವ ಎಂದು ಸಂತಸ ವ್ಯಕ್ತಪಡಿಸಿದರು.

ಇಂದು ಪುರಸ್ಕೃತರ ಮನೆಗೆ ತೆರಳಿ ನಾಡೋಜ ಡಾ. ಮಹೇಶ ಜೋಶಿ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿ ಮಾತನಾಡಿದ ಅವರು ನಿಮ್ಮಂತಹ ಹಿರಿಯ ಸಾಹಿತ್ಯ ಸಾಧಕರು ನಮ್ಮೊಂದಿಗಿರುವುದು ನಮ್ಮ ಹೆಮ್ಮೆಯಾಗಿದೆ. ಪರಿಷತ್ತಿಗೆ ನಿಮ್ಮಂತವರ ಮಾರ್ಗದರ್ಶನ ಸದಾ ಇರಬೇಕೆಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ **ನೇ. ಭ ರಾಮಲಿಂಗಶೆಟ್ಟಿ,** ಗೌರವ ಕೋಶಾಧ್ಯಕ್ಷರಾದ **ಬಿ.ಎಂ. ಪಟೇಲ್‌ಪಾಂಡು** ಹಾಗೂ ಕ.ಸಾ.ಪ.ದ ಮಾಧ್ಯಮ ಸಲಹೆಗಾರರಾದ **ಶ್ರೀನಾಥ ಜೋಶಿ** ಅವರುಗಳು ಉಪಸ್ಥಿತರಿದ್ದರು.

ಇದರೊಂದಿಗೆ ಭಾವಚಿತ್ರವನ್ನು ಲಗತ್ತಿಸಲಾಗಿದೆ.

**ನಾಡೋಜ ಡಾ. ಮಹೇಶ ಜೋಶಿ** ಅವರಿಂದ ನುಗ್ಗೇಹಳ್ಳಿ ಪಂಕಜ ಅವರಿಗೆ **ಪದ್ಮಭೂಷಣ ಡಾ. ಬಿ.ಸರೋಜಾದೇವಿ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ**

**(ನೇ.ಭ. ರಾಮಲಿಂಗಶೆಟ್ಟಿ)**
ಗೌರವ ಕಾರ್ಯದರ್ಶಿಗಳು

---

ದಯವಿಟ್ಟು ಇದನ್ನು ರಾಜ್ಯಮಟ್ಟದ ಸುದ್ದಿಯಾಗಿ ಪ್ರಕಟಿಸಲು ಕೋರಿದೆ.